ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿ (ಪವ್ಯ)(ಜಾರಿ) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ (ಜಾರಿ), ಮಲೆನಾಡು ವಿಭಾಗ,
ವಾಣಿಜ್ಯ ತೆರಿಗೆ ಭವನ, 100ಅಡಿ ರಸ್ತೆ, 'ಎ' ಬ್ಲಾಕ್, 12ನೇ ತಿರುವು, ಗೋಪಾಲಗೌಡ ಬಡಾವಣೆ, ಶಿವಮೊಗ್ಗ-577205.
ದೂರವಾಣಿ ಸಂಖ್ಯೆ: 08182 258720, mail ID: cto-gm.smg.enf@ctd.ka.gov.in

ಸಂಖ್ಯೆ: ವಾತೆಅ(ಪವ್ಯ)(ಜಾರಿ)/ಶಿವಮೊಗ್ಗ/ಹರಾಜು/ಟಿನಂ:330/2023-24 ದಿನಾಂಕ:27/02/2024

## ಎಮ್ ಎಸ್ ಸ್ಕ್ರಾಪ್ ಸರಕಿನ ಹರಾಜು ಪ್ರಕಟಣೆ

ವಾಣಿಜ್ಯ ತೆರಿಗೆ ಅಧಿಕಾರಿ(ಪವ್ಯ)(ಜಾರಿ) ಶಿವಮೊಗ್ಗ ಇವರು ದಿನಾಂಕ: 27-10-2023 ರಂದು 16,946 ಕೆ.ಜಿ ಎಮ್.ಎಸ್ ಸ್ಕ್ರಾಪ್(M S Scrap) ಸರಕನ್ನು ಜಿಎಸ್‌ಟಿ ಕಾಯ್ದೆ 2017, ಕಲಂ-130 ರ ಅಡಿಯಲ್ಲಿ ಮುಟ್ಟು ಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತ ರೂ. 6,90,442=00ನ್ನು ವಸೂಲಿ ಮಾಡುವ ಸಂಬಂಧವಾಗಿ, ಸರಕನ್ನು ಮಾತ್ರ " ಎಲ್ಲಿ ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ" ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಆಸಕ್ತಿವುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ ಲಕೋಟೆಯನ್ನು ದಿನಾಂಕ: 16/03/2024 ರಂದು ಪೂರ್ವಾಹ್ನ:11.30ರ ಸಮಯಕ್ಕೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಶಿವಮೊಗ್ಗ ಇವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿವುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್ ಅನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

### :ಷರತ್ತು ಮತ್ತು ನಿಬಂಧನೆಗಳು:

(1), ಮುಟ್ಟುಗೋಲು ಹಾಕಿಕೊಂಡಿರುವ ಎಮ್.ಎಸ್ ಸ್ಕ್ರಾಪ್ ಸರಕನ್ನು " ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ) ಶಿವಮೊಗ್ಗ" ಇವರ ಕಛೇರಿಯ ಆವರಣದ ಕಾರ್ ಶೆಡ್‌ಗಳಲ್ಲಿ ಸರಕನ್ನು ಸಂಗ್ರಹಿಸಿ ಇಡಲಾಗಿರುತ್ತದೆ. ಆಸಕ್ತಿವುಳ್ಳ ಖರೀದಿದಾರರು ದಿನಾಂಕ: 06/03/2024ರಂದು ಕಛೇರಿಯ ವೇಳೆಯಲ್ಲಿ (ಬೆಳಿಗ್ಗೆ:10.30 ರಿಂದ ಸಂಜೆ: 5-00 ರ ತನಕ) ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. (2), ಹಾರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಖರೀದಿದಾರರು ಅನುಬಂಧದಲ್ಲಿರುವ ಸರಕಿನ ಬಿಡ್‌ಗೆ ಭಾಗವಹಿಸಲು ಇಚ್ಚಿಸಿದಲ್ಲಿ ರೂ. 50,000/-(ರೂಪಾಯಿ ಐವತ್ತು ಸಾವಿರ ಮಾತ್ರ) ಮೌಲ್ಯದ ಡಿ.ಡಿ ಮೊತ್ತವನ್ನು "Commercial Tax Officer (GM)(ENF) Shivamogga. ಇವರ ಹೆಸರಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. (3), ತದನಂತರ ಆಸಕ್ತಿವುಳ್ಳ ಖರೀದಿದಾರರು ( ಕಡ್ಡಾಯವಾಗಿ ಜಿಎಸ್‌ಟಿ ಕಾಯ್ದೆ ಅಡಿ ನೋಂದಾಯಿತರಾಗಿರಬೇಕು) ಸೀಲು ಮಾಡಿದ ಬಿಡ್ ಲಕೋಟೆ ಜೊತೆಗೆ ಡಿ.ಡಿ ಯನ್ನು ನೋಂದಣಿ ಅಂಚೆ ಅಥವಾ ವೈಯುಕ್ತಿಕವಾಗಿ ದಿನಾಂಕ: 13/03/2024ರ ಸಯಾಂಕಾಲ 5-00 ಘಂಟೆಯ ಒಳಗಾಗಿ ಕಛೇರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪೋಸ್ಟಲ್ ವಿಳಂಬಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. (4), ಬಿಡ್ ಮೊತ್ತವನ್ನು ಸರಕಿಗೆ ಪ್ರತಿ ಕೆ.ಜಿ ಗೆ ರೂಪಾಯಿ ಲೆಕ್ಕದಲ್ಲಿ ನೀಡುವುದು ಹಾಗು ಸರಕಿಗೆ ಷಡ್ಯೂಲ್ ಅನ್ವಯ ಅನ್ವಯಿಸುವ ದರದಲ್ಲಿ ಜಿ ಎಸ್ ಟಿ ತೆರಿಗೆ ಪ್ರತ್ಯೇಕವಾಗಿರುತ್ತದೆ. (5), ಕಾರಾಣಾಂತರಗಳಿಂದ ಬಿಡ್ ಅನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿ ಹೊಂದಿರುತ್ತಾರೆ. (6), ಯಶಸ್ವಿಯಾದ ಬಿಡ್ಡುದಾರರು ಬಿಡ್ ಮೊತ್ತವನ್ನು 07 (ಏಳು) ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ-ಪಾವತಿ ಮುಖಾಂತರ ಜಿ ಎಸ್ ಟಿ ಲೆಕ್ಕಕ್ಕೆ ಪಾವತಿಸಬೇಕು ಮತ್ತು ಸದರಿ ಖರೀದಿಯನ್ನು ಅನೋಂದಾಯಿತ ಖರೀದಿಯೆಂದು ಪರಿಗಣಿಸಬೇಕು. (7), ನಿಗದಿತ 07 (ಏಳು) ದಿನಗಳೊಳಗಾಗಿ ಪೂರ್ತಿ ಬಿಡ್ ಮೊತ್ತವನ್ನು ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (8)ಪೂರ್ತಿ ಬಿಡ್ ಮೊತ್ತವನ್ನು ಪಾವತಿಸಿದ ನಂತರವೇ ಸರಕನ್ನು ಹೇಗೆ ಇದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಹಸ್ತಾಂತರಿಸಲಾಗುವುದು. (9), ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯ ಜಾಹಿರಾತು ಫಲಕದಲ್ಲಿ ಪ್ರಕಟಿಸಲಾಗಿದೆ.

ವಾಣಿಜ್ಯ ತೆರಿಗೆ ಅಧಿಕಾರಿ
(ಪ.ವ್ಯ)(ಜಾರಿ), ಶಿವಮೊಗ್ಗ)(ಜಾರಿ)
ಶಿವಮೊಗ್ಗ.